ಶ್ರೀ ಸಯದ್ ಜಲ್ಫಿಕರ್ ಹಶ್ಮಿ:- ಅದು ಡಿಸ್ಟ್ರಿಕ್ಟ್ ಆಗಿದೆ. ಈ ವರ್ಷ ಅಲ್ಲಿ ಪಿ.ಜಿ.ಸೆಂಟರ್ ಪ್ರಾರಂಭವಾಗಬೇಕು. ನಾಲ್ಕು ವರ್ಷದಿಂದ ಮಾನ್ಯ ವೀರಪ್ಪಮೊಯಿಲಿಯವರ ಸರ್ಕಾರವಿದ್ದಾಗ ಅವರು ಎಜುಕೇಷನ್ ಸಚಿವರಾಗಿದ್ದಾಗ ಆಶ್ವಾಸನೆಯನ್ನು ಕೊಟ್ಟರು. ಈಗ ತಾವು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇನ್ನೂ ಆಗಿಲ್ಲ.

ಶ್ರೀ ಡಿ.ಮಂಜುನಾಥ:- ಇದೇ ಪ್ರಶ್ನೆಯನ್ನು ಮಾನ್ಯ ಬಸವರಾಜ ಪಾಟೀಲ್ ಅಟ್ಟೂರ್ ಅವರು ಕೇಳಿದರು. ಈಗ ಅವರಿಗೆ ಏನು ಹೇಳಿದೆ. ಗುಲ್ಬರ್ಗಾ ಯುನಿವರ್ಸಿಟಿಯಲ್ಲಿ ಷುಗರ್ ಟೆಕ್ನಾಲಜಿ ಎಂದು ಒಂದು ಕೋರ್ಸ್ ಮಾಡಿದ್ದಾರೆ. ಈಗ ಅಲ್ಲಿ ಬೇರೆ ಕೋರ್ಸ್‌ಗಳನ್ನು ಮಾಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಎಂಬುದನ್ನು ವಿಶ್ವವಿದ್ಯಾನಿಲಯದಿಂದ ತಿಳಿದುಕೊಂಡು ನಾನು ಅವರಿಗೆ ತಿಳಿಸುತ್ತೇನೆ. ಆಮೇಲೆ ವಿಶ್ವವಿದ್ಯಾನಿಲಯದವರು ಕ್ರಮ ತೆಗೆದುಕೊಳ್ಳುತ್ತಾರೆ.

ಡಾ॥ ಹೆಚ್.ಸಿ.ಬಾಲಕೃಷ್ಣ:- ಈಗ ಮಾನ್ಯ ಮಂತ್ರಿಗಳು ಎಲ್ಲರಿಗೂ ಉಪನ್ಯಾಸಕರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಬಹುಶಃ ಹಿಂದೆ ಇದ್ದಂತಹ ಪದ್ಧತಿಯನ್ನು ಅನುಸರಿಸಿದರೆ ಹುಡುಗರಿಗೆ ಅನುಕೂಲವಾಗಬಹುದು. ಎರಡು ಅಥವಾ ಮೂರು ತಿಂಗಳು ಆಗಬಹುದು. ಈಗ ಕಾಲೇಜ್‌ಗಳಲ್ಲಿ ಪಾಠ ಮಾಡುವವರು ಇಲ್ಲ. ಅಲ್ಲಿ ಹುಡುಗರು ಬಿಟ್ಟು ಹೋಗುವಂತಹ ಪರಿಸ್ಥಿತಿ ಬರುತ್ತದೆ. ಅವರು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬರುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯವಿಟ್ಟು ಹಿಂದೆ ಇದ್ದಂತಹ ಪದ್ಧತಿಯನ್ನು ಅನುಸರಿಸಿದರೆ ಅನುಕೂಲವಾಗುತ್ತದೆ.

ಶ್ರೀ ಡಿ. ಮಂಜುನಾಥ್:- ಅದಷ್ಟು ಜಾಗ್ರತೆ ಉಪನ್ಯಾಸಕರನ್ನು ಕಳುಹಿಸಬೇಕೆಂಬುದೆ, ನಮ್ಮ ಉದ್ದೇಶವಿರುವುದು. ಅದರಲ್ಲೂ ಗ್ರಾಮಾಂತರ ಪ್ರದೇಶದ ಕಾಲೇಜುಗಳಿಗೆ ಉಪನ್ಯಾಸಕರನ್ನು ಕಳುಹಿಸಬೇಕೆಂದೇ ನಮ್ಮ ಉದ್ದೇಶವಿರುವುದು. ಅದನ್ನು ನಾವು ಮಾಡುತ್ತೇವೆ.

ವಿಷಯ:- ಮಂಗಳೂರು ನಗರದ ಸರ್ಕಾರಿ ಪ್ರೌಢಶಾಲೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 230 (2030)

ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದಲ್ಲಿ ತರಗತಿಯಲ್ಲಿ 25ಕ್ಕಿಂತ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳು ಇರುವ ಸರ್ಕಾರಿ ಪ್ರೌಢಶಾಲೆಗಳು ಎಷ್ಟು ಇವೆ (ವಿವರ ಒದಗಿಸುವುದು).

ಆ) ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರೌಢಶಾಲೆಗಳಿಗೆ ಕೊರತೆ ಇರುವ ಸ್ಥಳಗಳಿಗೆ ಸ್ಥಳಾಂತರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ

ಇ) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಿಗೆ ಸ್ಥಳಾಂತರಿಸಲಾಗುವುದು

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಮೂರು ಪ್ರೌಢಶಾಲೆಗಳು.

1. ಸರ್ಕಾರಿ ಪ್ರೌಢಶಾಲೆ ಮಲ್ಲಿಕಟ್ಟೆ

2. ಸರ್ಕಾರಿ ಪ್ರೌಢಶಾಲೆ ಹ್ಯೂಗೆ ಬಜಾರ್

3. ಸರ್ಕಾರಿ ಪ್ರೌಢಶಾಲೆ ಪ್ಯಾಕ್ಟೀಸಿಂಗ್(ಅಭ್ಯಾಸಿ)

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕುಂಬಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೆ, ಮಂಗಳೂರು ನಗರದ ತರಗತಿಗಳಲ್ಲಿ ಶೇ.25ಕ್ಕಂತ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವ ಎಷ್ಟು ಶಾಲೆಗಳು ಇವೆ ಎಂದು ಕೇಳಿದ್ದೆ. ಅದಕ್ಕೆ ಮೂರು ಶಾಲೆಗಳ ಲೆಕ್ಕವನ್ನು ಕೊಟ್ಟಿದ್ದಾರೆ. ಎರಡನೆಯದು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಾರಣ ಶಾಲೆಗಳನ್ನು ಬೇರೆ ಕಡಿಮೆ ಇರುವ ಕಡೆ ವರ್ಗಾಹಿಸುತ್ತೀರಾ ಎಂದು ಕೇಳಿದರೆ ಇಲ್ಲವೆಂದು ಉತ್ತರ ಹೇಳುತ್ತಾರೆ. ಹಾಗಾದರೆ ಈ ಮೂರು ಶಾಲೆಗಳನ್ನು ಕ್ಲೋಸ್ ಮಾಡುವ ಆಲೋಚನೆಯಲ್ಲಿ ಇದ್ದೀರಾ? ಇಲ್ಲವೆಂದು ಇದ್ದರೆ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ 25 ಕ್ಕಿಂತ ಕಡಿಮೆ ಇದೆ. ಅಧ್ಯಾಪಕರ ಸಂಖ್ಯೆ ಜಾಸ್ತಿ ಇದೆ. ಇಂಥ ಗೊಂದಲ ನಿರ್ಮಾಣವಾಗಿದೆ. ನನ್ನ ಕ್ಷೇತ್ರವಾದ ಮಂಗಳೂರು ನಗರದಲ್ಲಿ ಅನೇಕ ಅಪೇಕ್ಷೆಗಳು ಇದೆ. ನಮ್ಮಲ್ಲಿ ಈ ಹೈಸ್ಕೂಲ್ ಬರಬೇಕೆಂದು ಸ್ಥಳದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಎಂದು ನೀವು ಏನಾದರು ಶಾಲೆಗಳನ್ನು ಕ್ಲೋಸ್ ಮಾಡಿಬಿಟ್ಟರೆ ಇದರಿಂದ ನಿಮಗೆ ಲಾಭವಾಗಬಹುದು. ಆದರೆ ಜನರಿಗೆ ನಷ್ಟವಾಗುತ್ತದೆಯೋ ಇಲ್ಲವೋ? ಆ ದೃಷ್ಟಿಯಿಂದ ಅಪೇಕ್ಷೆ ಇದ್ದಲ್ಲಿ ಕೊಡುವ ಸರ್ಕಾರ ಔದಾರ್ಯವನ್ನು ತೋರಿಸಬೇಕಾಗಿತ್ತು. ಅದೇ ಶಾಲೆಗಳನ್ನು ತಾವು ಉಳಿಸುತ್ತೀರೆನ್ನುವುದಾದರೆ ಅಲ್ಲಿ ಸಂಖ್ಯೆಯನ್ನು ಏರಿಸುವುದಕ್ಕೆ ಏನು ಕ್ರಮ ಏನು ಮತ್ತು ಶಿಕ್ಷಕರ ಕಡೆಯಿಂದ ಏನು ಮಾಡಿಸುತ್ತೀರಿ. ಹಿಂದೆ ಹೆಚ್ಚು ಸಂಖ್ಯೆ ಇದ್ದಂತಹ ಶಾಲೆ ಅದು. ಈಗ ಕಡಿಮೆಯಾಗಿದೆ ಎಂಬ ಕಾರಣಕ್ಕಾಗಿ ಅದು ಏಕೆ ಮುಚ್ಚಬೇಕು. ದಯಮಾಡಿ ಇದಕ್ಕೆ ಉತ್ತರ ಬೇಕು. ಒಂದು ವೇಳೆ ಬೇರೆ ಕಡೆಗೆ ವರ್ಗಾಯಿಸಿದರೆ ನಿಮಗೆ ಆಗುವ ನಷ್ಟವೇನು? ಜನರಿಗಂತೂ ಲಾಭವಾಗುತ್ತದೆ.

10.50 ಎ.ಎಂ.

ಅಧ್ಯಕ್ಷರು:- ಟ್ರಾನ್ಸ್‌ಫರ್ ಮಾಡಬಹುದು, ನಮ್ಮಲ್ಲಿ ಒಂದು ಅಗತ್ಯ ಇದೆ, ನಮ್ಮಲ್ಲಿ ಒಂದು ಅವರಲ್ಲೊಂದು ಎರಡು ಅಡ್ಜೆಸ್ಟ್ ಮಾಡಿ ಮಾಡಬಹುದು.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಏನು ಇದೆ, ಇದು ಸಾಧುವಾಗಿರತಕ್ಕ ಪ್ರಶ್ನೆಯೇ. ಅದನ್ನು ನಾವು ಸಹ ಯೋಚನೆ ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಎಲ್ಲಿ ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿ ಇದೆ ಮತ್ತು ಮಕ್ಕಳ ಸಂಖ್ಯೆ ಕಡಿಮೆ ಇದೆ ಅಂತಹ ಕಡೆಗಳಲ್ಲಿನ ಶಾಲೆಗಳನ್ನು ಮುಚ್ಚಿಸಿ ಬೇರೆ ಎಲ್ಲಿ ಅವಶ್ಯಕತೆ ಇದೆ ಅಂತಹ ಕಡೆ ಕೊಡುವಂಥ ವ್ಯವಸ್ಥೆಯನ್ನು ಈಗ ನಾವು ಮಾಡುತ್ತಿದ್ದೇವೆ. ತಾವೇನು ಸಲಹೆಯನ್ನು ಕೊಟ್ಟಿದ್ದೀರಿ, ಇದರಲ್ಲಿ ಇರತಕ್ಕಂಥ ಉಪಾಧ್ಯಾಯರುಗಳನ್ನು ನಿಯೋಜನೆ ಮೇಲೆ ಬೇರೆ ಶಾಲೆಗಳಿಗೆ ನಾವು ಕಳುಹಿಸಿಕೊಟ್ಟಿದ್ದೇವೆ. ಆದರೆ ಈ ಮೂರು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಅದನ್ನು ಪರಿಶೀಲನೆ ಮಾಡಿ ಅಲ್ಲಿ ಅವಶ್ಯಕತೆ ಇಲ್ಲ ಅಂತ ಕಂಡು ಬಂದಲ್ಲಿ ಅದನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ ಎಂಬುದನ್ನು ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್:- ಬೇರೆ ಕಡೆ ಕಡಿಮೆ ವಿದ್ಯಾರ್ಥಿಗಳು ಇರುವ ಶಾಲೆಗಳನ್ನು

ಮುಚ್ಚಿಸಿ ನಮ್ಮಲ್ಲಿ ಹೊಸದಾಗಿ ಶಾಲೆಗಳನ್ನು ತೆರೆಯಲು ಅನುಮತಿ ನೀಡುತ್ತೀರಾ?

ಅಧ್ಯಕ್ಷರು:- ಅದನ್ನು ಇಲಾಖೆಯ ವಿವೇಚನೆಗೆ ಬಿಟ್ಟುಬಿಡೋಣ;

ವಿಷಯ:- ಯಡಹಳ್ಳಿ ಗುಡ್ಡದಲ್ಲಿ ನವಿಲುಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :232 (2481)

ಶ್ರೀ ಜೆ.ಟಿ.ಪಾಟೀಲ್ (ಬೀಳಗಿ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಬೀಳಗಿ ಮತಕ್ಷೇತ್ರದ ಯಡಹಳ್ಳಿ ಗ್ರಾಮದ ಗುಡ್ಡದಲ್ಲಿ ಹತ್ತಾರು ಸಾವಿರ ನವಿಲುಗಳಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಹಾಗೂ ಹೊರ ರಾಜ್ಯಗಳಿಂದ ಬೇರೆ ಬೇರೆ ಜಾತಿಯ ಪಕ್ಷಿಗಳು ಅಲ್ಲಿಗೆ ವಲಸೆ ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇವುಗಳ ರಕ್ಷಣೆಗಾಗಿ ಸರಕಾರ ಯಾವ ಕ್ರಮ ಕೈಗೊಂಡಿದೆ, ಕೈಗೊಳ್ಳದಿದ್ದರೆ ಇದಕ್ಕೆ ಕಾರಣಗಳೇನು?

ಇ) 1995-96ನೇ ಸಾಲಿನಲ್ಲಿಯೇ ಈ ರಕ್ಷಣೆ ಕಾರ್ಯಕ್ರಮ ರೂಪಿಸಿಕೊಂಡು ಕಾರ್ಯ ಪ್ರಾರಂಭಿಸುವ ಬಗ್ಗೆ ಸರಕಾರದವರು ಪರಿಶೀಲಿಸುವರೇ,

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ವೈ.ಮೇಟಿ (ಅರಣ್ಯ ಸಚಿವರು):-

ಅ) ಹೌದು

ಆ) ಇವುಗಳ ರಕ್ಷಣೆಗಾಗಿ ಬೀಳಗಿ ವಲಯದಲ್ಲಿ 5 ಕಿ.ಮೀ, ಹಾಗೂ ಮುದೋಳದಲ್ಲಿ 6 ಕಿ.ಮಿ.ಕಲ್ಲಿನ ಗೋಡೆ ಕಟ್ಟಲಾಗಿದೆ. ಸದ್ರಿ ಕ್ಷೇತ್ರದಲ್ಲಿ ಚಿಕ್ಕಪುಟ್ಟ ಅರಣ್ಯ ಉತ್ಪನ್ನಗಳನ್ನು ಹರಾಜು ಮೂಲಕ ಸಂಗ್ರಹಿಸುವುದನ್ನು ಕೈಬಿಡಲಾಗಿದೆ.

ಇ) 1995-96ನೇ ಸಾಲಿನಲ್ಲಿ ರಕ್ಷಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ಈ ಪ್ರದೇಶದಲ್ಲಿ ಇರುವಂತ ನವಿಲುಗಳ ಹಾಗೂ ಹೊರ ಪ್ರದೇಶಗಳಿಂದ ವಲಸೆ ಬರುವ ಹಕ್ಕಿಗಳ ಗಣತಿಯನ್ನು ಮಾಡಿ, ಅವುಗಳ ರಕ್ಷಣೆ ಹಾಗೂ ಅವುಗಳ ಹಿತಕ್ಕಾಗಿ ಬೇಕಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಶ್ರೀ ಜೆ.ಟಿ.ಪಾಟೀಲ್:- ಮಾನ್ಯ ಅಧ್ಯಕ್ಷರೆ. 1995-96ನೇ ಸಾಲಿನಲ್ಲಿ ಯಡಹಳ್ಳಿ ಗ್ರಾಮದ ಗುಡ್ಡದಲ್ಲಿರುವ ಹತ್ತಾರು ಸಾವಿರ ನವಿಲುಗಳನ್ನು ಮತ್ತು ಬೇರೆ ಬೇರೆ ಜಾತಿಯ ಪಕ್ಷಿಗಳನ್ನು ರಕ್ಷಣೆ ಮಾಡುವ ಸಲುವಾಗಿ ಯಾವರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಆ ಗುಡ್ಡವನ್ನು ಹೇಗೆ ಅಭಿವೃದ್ಧಿ ಪಡಿಸುತ್ತೀರಿ ಎಂಬ ಬಗ್ಗೆ ಖಚಿತವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಚ್.ವೈ.ಮೇಟಿ:- ಈಗ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಗಮನದಲ್ಲಿದೆ, ಈಗಾಗಲೇ ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಈ ಯೋಜನೆ ತಯಾರಾದ ನಂತರ ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿ ಶೀಘ್ರವಲ್ಲಿ ಅದನ್ನು ಪ್ರಾರಂಭ ಮಾಡಲು ಪ್ರಯತ್ನಪಡುತ್ತೇನೆ.